ದಿನಾಂಕಃ **23.01.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ ಸಿ ವೈ ವಕೀಲರಿಂದಃ

ನಾನು ಈ ವ್ಯಾಜ್ಯದಲ್ಲಿ ವಾದಿ ಪರ ಸಾಕ್ಷಿ ನುಡಿದಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ನನ್ನ ವಕೀಲರಿಗೆ ನಾನೇ ನನ್ನ ಪರವಾಗಿ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ಹೇಳಿ ಬರೆಸಿದ್ದು, ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಪಾಟಿ ಸವಾಲುಃ **1** ರಿಂದ **3** ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ರವರಿಂದಃ

ವಾದಿ ನನ್ನ ಸಂಬಂಧಿಕರಲ್ಲ. ವಾದಿಯವರು ನಿಮ್ಮ ಭಾವ ಆಗಬೇಕು ಅಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯು ಮಂಜೂರಾಗುವ ಕಾಲಕ್ಕೆ ಬೇರೆ ಯಾರಿಗೆ ಮಂಜೂರು ಆಗಿದ ಬಗ್ಗೆ ವಿಷಯ ಗೊತ್ತು ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಸಂತ್ಯೆ ಬಸಪ್ಪ( ವಾದಿಯ ತಂದೆ), ಗದ್ದೆ ಬಸಪ್ಪ, ಚಿಪ್ಪೆ ಈರಪ್ಪ ಸದರಿ ಸರ್ವೆ ನಂಬರಲ್ಲಿ ಆಸ್ತಿಗಳು ಮಂಜೂರು ಆಗಿರುತ್ತವೆ. ಆಸ್ತಿ ಮಂಜೂರಾಗುವ ಕಾಲಕ್ಕೆ ರೆವಿನ್ಯೂ ಇಲಾಖೆಯಿಂದ ದರಕಾಸ್ತು ಗೆ ಸಂಬಂಧಿಸಿದಂತೆ ಒಂದು ಸ್ಕೆಚ್ ಅನ್ನು ತಯಾರಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆ ಒಂದು ನಕಾಶೆ ಮತ್ತು ಸಾಗುವಳಿ ಚೀಟಿ ಕೊಡುವ ಸಂದರ್ಭದಲ್ಲಿ ದಾವಾ ಸ್ವತ್ತಿನಲ್ಲಿ ಒಂದು ರಸ್ತೆ ಇದೆ ಎಂದು ನಮೂದಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆ ನಕ್ಷೆಯಲ್ಲಿ ಅಡವಿಗೆ ಹೋಗುವ ದಾರಿ ಇದೆ ಎಂದು ಕಾಣಿಸಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಯಾವುದೇ ದಾರಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ರಸ್ತೆಯನ್ನು ಜನರು ಈಗಲೂ ಸಹ ಉಪಯೋಗಿಸುತ್ತಿದ್ದಾರೆ ಅಂದರೆ ಸಾಕ್ಷಿ ರಸ್ತೆ ಇಲ್ಲ ಎಂದು ಉತ್ತರಿಸುತ್ತಾರೆ. ಸ.ನಂ.102 ರಲ್ಲಿ ಸಾಗುವಳಿಯನ್ನು ಸುಮಾರು ಜನ ಮಾಡಿಕೊಡಿರುತ್ತಾರೆ ಅಂದರೆ ಸರಿ. ಅಕ್ರಮ ಸಾಗುವಳಿ ಮಾಡುತ್ತಿರುವ

ಜನರು ಇದೇ ರಸ್ತೆಯನ್ನು ಉಪಯೋಗಿಸಿಕೊಂಡು ಬಂದಿರುತ್ತಾರೆ ಅಂದರೆ ಸಾಕ್ಷಿಯು ಬೇರೆ ದಾರಿ ಇದೆ ಅದನ್ನು ಬಿಟ್ಟು ಈಗ ದಾವಾ ಆಸ್ತಿಯಲ್ಲಿ ದಾರಿ ಇದೆ ಎಂದು ಸಾಧಿಸಿ ತಕರಾರು ಪಡಿಸುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರದಲ್ಲಿ ಹೇಳಿದಂತೆ ವಾದಿ ಮತ್ತು ವಾದಿಯರ ಸಹೋದರರ ಮದ್ಯ ಹಿಸ್ಸೆ ಆಗಿದ್ದು, ಅವರಿಬ್ಬರೂ ಸೇರಿ ಶೇಖರಪ್ಪ ಬಿನ್ ದ್ಯಾವಪ್ಪ ಇವರಿಗೆ ಒಂದು ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ನಮೂದಿಸಿರುತ್ತೇನೆ ಅಂದರೆ ಸರಿ. ಶೇಖರಪ್ಪ ರವರಿಗೆ ಮಾರಿದ ಜಮೀನು, ವಾದಿಯ ಜಮೀನು ಮತ್ತು ಹೊಳೆ ಬಸಪ್ಪನವರ ಜಮೀನಿನ ಮದ್ಯ ಪೋಡಿ ಆಗಿಲ್ಲ ಅಂದರೆ ಸರಿ. ಪೋಡಿ ಆಗದೇ ಇರುವ ಕಾರಣ ವಾದಿಯ ಜಮೀನು ಖಚಿತವಾಗಿ ಇಲ್ಲೇ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹಿಸ್ಸೆ ಪತ್ರದ ಆಧಾರದ ಮೇಲೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ದಾವಾ ಆಸ್ತಿಯಲ್ಲಿ ಸಾರ್ವಜನಿಕರು ಓಡಾಡಲು ರಸ್ತೆ ಇದ್ದರೂ ಸಹ ವಾದಿಗೆ ಮತ್ತು ಅವನ ಸೋಹದರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).**

ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ವ್ಯವಹಾರ ನ್ಯಾ. ಮತ್ತು ಜೆ.ಎಂ.ಎಫ್.ಸಿ
ಸೊರಬ.